ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1736/2017

| | | | |
|---|---|---|---|
| ಸಾಕ್ಷಿದಾರರು ಹೆಸರು | : | ಗಿರೀಶ್ ಎಂ | ದಿನಾಂಕಃ **29.11.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಮಹದೇವು | |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಗೇಟ್ ಮ್ಯಾನ್, ಬದನಗುಪ್ಪೆ | **CW-3** |
| ವಾಸಸ್ಥಳ | : | ಬದನಗುಪ್ಪೆ | **PW-4** |

ಮುಖ್ಯ ವಿಚಾರಣೆ : ಮಾನ್ಯ ಹಿರಿಯ ಸರ್ಕಾರಿ ಅಭಿಯೋಜಕರು, ರೈಲ್ವೆ ಇಲಾಖೆಃ

ನಾನು ಈಗ ಎಂಟು ವರ್ಷದಿಂದ ಬದನಗುಪ್ಪೆಯಲ್ಲಿ ಇರುವ ಗೇಟ್ ನಂಬರ್ 47 ರಲ್ಲಿ ಗೇಟ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕಃ 25.04.2017 ರಂದು ಮೇಲೆ ಹೇಳಿದ ಗೇಟ್ ನಲ್ಲಿ ಸಂಜೆ 7 ರಿಂದ ದಿಃ 26.04.2017 ರ ಬೆಳಿಗ್ಗೆ 7 ಗಂಟೆಯವರೆಗೆ ಕರ್ತವ್ಯದಲ್ಲಿದ್ದು, ದಿನಾಂಕಃ 25.04.2017 ರಂದು ರಾತ್ರಿ 8.38 ರ ಸಮಯದಲ್ಲಿ ರೈಲು ಸಂಖ್ಯೆಃ 56282 ಮೈಸೂರು ಕಡೆಯಿಂದ ಚಾಮರಾಜನಗರದ ಕಡೆಗೆ ಬರುತ್ತಿದ್ದು, ಚಾಮರಾಜನಗರ ಸ್ಟೇಷನ್ ಮಾಸ್ಟರ್ ರವರು ನನಗೆ ಗೇಟನ್ನು ಮುಚ್ಚುವಂತೆ ಫೋನ್ ಮೂಲಕ ತಿಳಿಸಿದ್ದು, ಅದರಂತೆ ನಾನು ರಾತ್ರಿ 8.38 ರ ಸಮಯದಲ್ಲಿ ಗೇಟನ್ನು ಮುಚ್ಚಿರುತ್ತೇನೆ. ನಂತರ ರಾತ್ರಿ 8.40 ರ ಸಮಯದಲ್ಲಿ ಒಂದು ಯಮಹ ಕ್ರಕ್ಸ್ ನೋಂದಣಿ ಸಂಖ್ಯೆಃಕೆಎ 09 ಇಜಿ 1697 ವಾಹನವನ್ನು ಅದರ ಚಾಲಕ ಚಾಮರಾಜನಗರದ ಕಡೆಯಿಂದ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಗೇಟಿನ ಎಡ ಭಾಗಕ್ಕೆ ಗುದ್ದಿದ್ದು ಬೂಮ್ ಡ್ಯಾಮೇಜ್ ಆಗಿ ತುಂಡಾಗಿರುತ್ತದೆ. ನಂತರ ನಾನು ಈ ವಿಚಾರವನ್ನು ಚಾಮರಾಜನಗರ ಸ್ಟೇಷನ್ ಮಾಸ್ಟರ್ ರವರಿಗೆ ಫೋನ್ ಮೂಲಕ ತಿಳಿಸಿ ಸದರಿ ಅಪಘಾತ ಮಾಡಿದ ಬೈಕನ್ನು ನನ್ನ ವಶಕ್ಕೆ ಪಡೆದಿದ್ದು ಅದರ ಚಾಲಕ ಓಡಿಹೋಗಿರುತ್ತಾನೆ. ನಂತರ ಸದರಿ ಗೇಟನ್ನು ಮುಚ್ಚಲು ತೆಗೆಯಲು ಆಗದ ಕಾರಣ ಸೇಪ್ಟಿ ಚೈನ್ ಹಾಕಿ ರೈಲು ಸಂಚಾರಕ್ಕೆ ಅನುವು ಮಾಡಿಕೊಟ್ಟಿರುತ್ತೇನೆ. ನಂತರ ದಿಃ 26.04.2017 ರಂದು ಬೆಳಿಗ್ಗೆ 7.00 ಗಂಟೆಗೆ ನಂತರದ ಪಾಳಿಯ ಗೇಟ್ ಮ್ಯಾನ್ ಆದ ನಿಂಗಣ್ಣರವರು ಬಂದಿದ್ದು, ಅವರಿಗೂ ಸಹ ಈ ವಿಚಾರ ತಿಳಿಸಿ ಕರ್ತವ್ಯವನ್ನು ಅವರಿಗೆ ವಹಿಸಿ ಅಪಘಾತ ಮಾಡಿದ ಬೈಕನ್ನು ಅವರ ವಶಕ್ಕೆ ನೀಡಿ ನಾನು ಮನೆಗೆ ಹೋಗಿರುತ್ತೇನೆ. ನಂತರ ಅದೇ ದಿನ ಸುಮಾರು ಬೆಳಿಗ್ಗೆ 7.30 ಗಂಟೆ ಸಮಯಕ್ಕೆ ರೈಲ್ವೆ ಪೋಲೀಸರು ನನಗೆ ಕರೆ ಮಾಡಿ, ಸ್ಥಳಕ್ಕೆ ಬರುವಂತೆ ಕರೆದಿದ್ದು, ನಾನು ಸ್ಥಳಕ್ಕೆ ಹೋಗಿದ್ದು, ಬೆಳಿಗ್ಗೆ ಸುಮಾರು 8.00 ರಿಂದ 9.00 ಗಂಟೆಯ ಒಳಗೆ ಮಹಜರ್ ಮಾಡಿ ಅಪಘಾತ ಮಾಡಿದ ಬೈಕನ್ನು ವಶಕ್ಕೆ ಪಡೆದುಕೊಂಡಿದ್ದು ನಾನು ಮಹಜರಗೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿಃ1 ರ

ಮಹಜರನ್ನು ತೋರಿಸಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ1(ಸಿ) ಎಂದು ಗುರುತಿಸಲಾಯಿತು.

ನಂತರ ದಿನಾಂಕಃ 26.05.2017 ರಂದು ಆರ್ ಪಿ ಎಫ್ ಪೋಲೀಸರು ನನ್ನನ್ನು ಮೈಸೂರಿಗೆ ಕರೆಸಿದ್ದು, ಬೈಕನ್ನು ಮತ್ತು ಆರೋಪಿಯನ್ನು ನನಗೆ ತೋರಿಸಿದ್ದು, ಆ ದಿನ ಅಪಘಾತ ಮಾಡಿದ ಬೈಕು ಮತ್ತು ಚಾಲಕನೂ ನಾನು ನೋಡಿ ಗುರುತಿಸಿರುತ್ತೇನೆ. ಈ ಬಗ್ಗೆ ಮಹಜರ್ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಈಗ ಸದರಿ ಮಹಜರನ್ನು ನೋಡುತಿತದ್ದು ನನ್ನ ಸಹಿಯನ್ನು ಗುರುತಿಸುತ್ತೇನೆ. ಮಹಜರ ಈಗಾಗಲೇ ನಿಪಿಃ10 ಎಂದೂ, ಸಾಕ್ಷಿ ಸಹಿಯನ್ನು ನಿಪಿಃ10(ಬಿ ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಹೇಳಿಕೆ ನೀಡಿರುತ್ತೇನೆ. ಆ ದಿನ ಅಪಘಾತ ಮಾಡಿದ ಬೈಕಿನ ಚಾಲಕ ನ್ಯಾಯಾಲಯದ ಮುಂದೆ ಇದ್ದಾರೆ. ನಿಪಿಃ 2 ಪೋಟೋದಲ್ಲಿ ಅಪಘಾತವಾದ ಸ್ಥಳ ಕಂಡು ಬರುತ್ತದೆ. ನಿಪಿ 3 ರಲ್ಲಿ ಅಪಘಾತ ಮಾಡಿದ ಬೈಕ್ ಮತ್ತು ಅದರ ಚಾಲಕ ಕಂಡುಬರುತ್ತಾರೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಎಸ್ ವಕೀಲರಿಂದಃ**

ನಾನು ವಾಸ ಮಾಡುವ ಗ್ರಾಮದಲ್ಲಿಯೇ ರೈಲ್ವೆ ಸ್ಟೇಷನ್ ಇದೆ ಎಂದರೆ ಸರಿ . ನಾನು ಘಟನೆ ನಡೆದ ಬಗ್ಗೆ ನಮ್ಮ ಹಿರಿಯ ಅಧಿಕಾರಿಗಳಿಗೆ ಲಿಖಿತವಾಗಿ ದೂರು ನೀಡಿಲ್ಲ. ಈ ಹಿಂದೆ ಸಹಾ ನಾನು ಇದೇ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿ . ನಾನು ಸಂಜೆ 7.00 ರಿಂದ ಬೆಳಿಗ್ಗೆ 7.00 ಗಂಟೆಯ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ. ಕರ್ತವ್ಯ ಮುಗಿದ ನಂತರ ನಾನು ಮನೆಗೆ ಹೋಗಿರುತ್ತೇನೆ. ನಮ್ಮ ಮನೆಗೂ ಮತ್ತು ಕೃತ್ಯ ನಡೆದ ಸ್ಥಳಕ್ಕೂ ಸುಮಾರು 600 ರಿಂದ 700 ಮೀಟರ್ ಅಂತರ ಇರುತ್ತದೆ. ಕೃತ್ಯ ನಡೆದ ಸ್ಥಳದ ರೈಲ್ವೆ ಗೇಟ್ ನಲ್ಲಿ ನಾವು ಮೂರು ಜನ ಕೆಲಸ ಮಾಡುತ್ತೇವೆ. ಕೃತ್ಯ ನಡೆದ ಸ್ಥಳದಲ್ಲಿ ವಾಹನಗಳು ಸಂಚರಿಸುತ್ತವೆ ಎಂದರೆ ಸರಿ . ರೈಲ್ವೆ ಗೇಟಿನ ಎರಡೂ ಬದಿಗೂ ರಸ್ತೆಯಲ್ಲಿ ರಸ್ತೆ ಉಬ್ಬುಗಳನ್ನು ಹಾಕಿದ್ದಾರೆ ಎಂದರೆ ಸರಿ . ಕೃತ್ಯ ನಡೆದ ಸ್ಥಳದ ಬಳಿ ದಾಸನೂರು ಕಡೆಗೆ ಹೋಗುವ ರಸ್ತೆ ಇದ್ದು ಅಲ್ಲಿ ಆಟೋ ನಿಲ್ದಾಣ ಮತ್ತು ಬಸ್ ನಿಲ್ದಾಣ ಇದೆ ಎಂರದೆ ಸರಿ . ಆ ರಸ್ತೆಯ ಎರಡೂ ಬದಿಗಳಲ್ಲಿ ಆಸ್ಪತ್ರೆ ಮತ್ತು ಅಂಗಡಿಗಳು ಇವೆ ಎಂದರೆ ಸರಿ . ಮೈಸೂರಿಗೆ ಹೋಗುವ ಜನ ನಮ್ಮ ರೈಲ್ವೆ ನಿಲ್ದಾಣದಲ್ಲಿ ಹತ್ತಿ ಇಳಿಯುತ್ತಾರೆ ಎಂದರೆ ಸರಿ . ಅಕ್ಕಪಕ್ಕದ ಹಳ್ಳಿಯ ಜನರು ನಮ್ಮ ರೈಲ್ವೆ ನಿಲ್ದಾಣದ ಅಕ್ಕಪಕ್ಕದಲ್ಲಿ ತಮ್ಮ ವಾಹನಗಳನ್ನು ನಿಲ್ಲಿಸುತ್ತಾರೆ ಎಂದರೆ ಸರಿ . ಪ್ರತಿದಿನ ರೈಲು ನಿಗದಿತ ವೇಳೆಯಲ್ಲಿ ಸಂಚಾರ ಮಾಡುತ್ತದೆ ಎಂದರೆ ಸರಿ . ನಾನು ಆ ದಿನ ರಾತ್ರಿ 8.38 ರ ಸಮಯದಲ್ಲಿ ಗೇಟನ್ನು ಮುಚ್ಚಿರುತ್ತೇನೆ. ಇದಾದ 10 ನಿಮಿಷಗಳ ನಂತರ ನಾನು ಗೇಟನ್ನು ತೆರೆದಿರುತ್ತೇನೆ. ರೈಲ್ವೆ ಗೇಟನ್ನು ಹಾಕಿದ ಪ್ರತಿಸಾರಿ ಎರಡೂ ಬದಿಗಳಲ್ಲಿ ವಾಹನಗಳು ನಿಂತಿರುತ್ತೆವೆ ಎಂದರೆ ಸರಿ. ಗೇಟಿನ ಎರಡೂ ಬದಿಯಲ್ಲಿ ರಸ್ತೆಯ ಉಬ್ಬುಗಳು ಇರುವುದರಿಂದ ವಾಹನಗಳು ನಿಧಾನವಾಗಿ ಚಲಿಸುತ್ತವೆ ಎಂದರೆ ಸರಿ .

ನಮ್ಮ ಕರ್ತವ್ಯದ ಕೊಠಡಿಯಿಂದ ರೈಲ್ವೆ ಗೇಟು ಸುಮಾರು 30 ಮೀಟರ್ ದೂರದಲ್ಲಿರುತ್ತದೆ. ನಮ್ಮ ಕರ್ತವ್ಯದ ಕೊಠಡಿಯಿಂದ ರೈಲ್ವೆ ಗೇಟು ಉತ್ತರ ದಿಕ್ಕಿಗೆ ಬರುತ್ತದೆ. ರೈಲು ಬರುವಾಗ ನಾವು ಅದನ್ನು ಗಮನಿಸುತ್ತೇವೆ ಎಂದರೆ ಸರಿ . ಸದರಿ ಗೇಟಿನ ಉದ್ದ , ಅಗಲ ಮತ್ತು ತೂಕ ನನಗೆ ಗೊತ್ತಿಲ್ಲ. ಕೃತ್ಯದ ಸಂದರ್ಬದಲ್ಲಿ ಬೈಕಿನ ಯಾವುದೇ ಬಿಡಿಭಾಗಗಳು ಸ್ಥಳದಲ್ಲಿ ಬಿದ್ದಿರುವ ಬಗ್ಗೆ ನಾನು ಗಮನಿಸಲಿಲ್ಲ. ನಾನು

ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿ ಆ ದಿನ ಬೈಕಿನಲ್ಲಿ ಸ್ಥಳಕ್ಕೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ಬೈಕನ್ನು ಸ್ಥಳದಲ್ಲಿ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಸ್ಥಳ ಮಹಜರ್ ಗೆ ಪಂಚರಾಗುವಂತೆ ನನಗೆ ಲಿಖಿತವಾಗಿ ನೋಟೀಸ್ ನೀಡಿರುವುದಿಲ್ಲ. ಮೈಸೂರಿಗೆ ಬಂದು ಆರೋಪಿ ಮತ್ತು ಬೈಕನ್ನು ಗುರುತಿಸುವಂತೆ ನನಗೆ ಲಿಖಿತವಾಗಿ ನೋಟೀಸ್ ನೀಡಿರುವುದಿಲ್ಲ. ಸ್ಥಳ ಮಹಜರ್ ಗೆ ನನ್ನನ್ನು ಬಿಟ್ಟು ಬೇರೆ ಯಾರು ಪಂಚರನ್ನಾಗಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರದ ಕಾರಣ ನಿಪಿ 1 ಮಹಜರನಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಆರೋಪಿಯು ತನ್ನ ಬೈಕಿನಲ್ಲಿ ರೈಲ್ವೆ ಗೇಟಿಗೆ ಗುದ್ದಿಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸ್ಟೇಷನ್ ಮಾಸ್ಟರ್ ರವರಿಗೆ ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಸ್ಥಳಕ್ಕೆ ಪೋಲೀಸರು ಬಂದಿರಲಿಲ್ಲ ಮತ್ತು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಎಷ್ಟು ಕಡೆ ಸಹಿ ಮಾಡಿದ್ದೇನೆ ಎಂದು ಹೇಳಲು ಆಗುವುದಿಲ್ಲ. ನನ್ನ ಸಮಕ್ಷಮ ಬೈಕನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ದಿಃ 26.04.2017 ರಂದು ನಾನು ಬೈಕನ್ನು ನಿಂಗಣ್ಣರವರ ವಶಕ್ಕೆ ನೀಡಿದ್ದೇನೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 26.05.2017 ರಂದು ಆರ್ ಪಿ ಎಫ್ ಪೋಲೀಸರು ನನ್ನನ್ನು ಮೈಸೂರಿಗೆ ಕರೆಯಿಸಿ ನನ್ನ ಸಮಕ್ಷಮ ಆರೋಪಿ ಮತ್ತು ಬೈಕನ್ನು ನನಗೆ ತೋರಿಸಿದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ 10 ರಂತೆ ನನ್ನ ಸಮಕ್ಷಮ ಮಹಜರ್ ಮಾಡಿದರು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಬೈಕಿಗೆ ಯಾವುದೇ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರ ಪೋಟೋದಲ್ಲಿ ಕಾಣುವ ಗೇಟನ್ನು ಯಾರು ತೆಗೆದಿರುತ್ತಾರೆ ಮತ್ತು ರಿಪೇರಿ ಮಾಡಿರುತ್ತಾರೆ ಎಂಬುದು ಹೇಳಲು ಆಗುವುದಿಲ್ಲ ಸಾಕ್ಷಿ ಮುಂದುವರೆದು ನಮ್ಮ ಇಲಾಖೆಯವರು ಬಂದಿದ್ದರು ಎಂದು ನುಡಿಯುತ್ತಾರೆ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ಅಪಘಾತ ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ರೈಲ್ವೆ ನಿಲ್ದಾಣದಲ್ಲಿ ನಿಲ್ಲಿಸಿದ ಬೈಕನ್ನು ಉಪಯೋಗಿಸಿಕೊಂಡು ಸುಳ್ಳು ದೂರನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ದಿನ ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ 2 ಮತ್ತು 3 ಪೊಟೋಗಳನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿ . ನಿಪಿ 1 ಮತ್ತು 10 ದಾಖಲೆಗಳಿಗೆ ನಾನು ಕಚೇರಿಯಲ್ಲಿ ಕುಳಿತುಸಹಿ ಮಾಡಿದ್ದೇನೆ ಎಂದರೆಸ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1736/2017

| | | | |
|---|---|---|---|
| ಸಾಕ್ಷಿದಾರರು ಹೆಸರು | : | ನಿರಂಜನ್ ಡಿ ಎಸ್ | ದಿನಾಂಕಃ 29.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : | ಸಣ್ಣಹನುಮಪ್ಪ ನಾಯಕ | |
| ವಯಸ್ಸು | : | 58 ವರ್ಷ | |
| ಉದ್ಯೋಗ | : | ಸಿನಿಯರ್ ಸೆಕ್ಷನ್ ಇಂಜಿಯರ್ ,ರೈಲ್ವೆ ಇಲಾಖೆ ದಾವಣೆಗೆರೆ | **CW-5** |
| ವಾಸಸ್ಥಳ | : | ದಾವಾಣಗೆರೆ | **PW-5** |

ಮುಖ್ಯ ವಿಚಾರಣೆ : ಮಾನ್ಯ ಹಿರಿಯ ಸರ್ಕಾರಿ ಅಭಿಯೋಜಕರು, ರೈಲ್ವೆ ಇಲಾಖೆಃ

2014 ರಿಂದ 2019 ರ ಜುಲೈ ವರೆಗೆ ಮೈಸೂರು ವಿಭಾಗದಲ್ಲಿ ಕಿರಿಯ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಮೈಸೂರು ರೈಲ್ವೆ ನಿಲ್ದಾಣದಿಂದ ಚಾಮರಾಜನಗರ ರೈಲ್ವೆ ನಿಲ್ದಾಣದವರೆಗೆ ನಮ್ಮ ಕಾರ್ಯ ವ್ಯಾಪ್ತಿ ಇರುತ್ತದೆ. ದಿಃ 25.04.2017 ರಂದು ರಾತ್ರಿ 8.50 ರಿಂದ 9.00 ರ ಸಮಯದಲ್ಲಿ ಮೈಸೂರು ಕಂಟ್ರೋಲ್ ರೂಂ ನಿಂದ ನನಗೆ ದೂರವಾಣಿ ಮೂಲಕ ಮಾಹಿತಿ ಬಂದಿದ್ದು ಅದರಂತೆ ನಂಜನಗೂಡು ಚಾಮರಾಜನಗರ ರೈಲ್ವೆ ಮಾರ್ಗದ 49/600 –700 ಕೀ.ಮೀ. ಬಳಿ ಇರುವ ಎಲ್ ಸಿ 47 ರೈಲ್ವೆ ಗೇಟಿಗೆ ಅಪಘಾತವಾಗಿದ್ದು ಸ್ಥಳಕ್ಕೆ ಹೋಗಿ ಪರಿಶೀಲಿಸುವಂತೆ ತಿಳಿಸಿರುತ್ತಾರೆ. ಈ ಸಂಬಂಧ ನಾನು ನಂಜನಗೂಡಿನಲ್ಲಿರುವ ನಮ್ಮ ಇಲಾಖೆಯ ಜೂನಿಯರ್ ಇಂಜಿನಿಯರ್ ಆದ ಲಡ್ಡುರಾಮ್‌ಮೀನಾ ರವರಿಗೆ ಸ್ಥಳಕ್ಕೆ ಹೋಗಿ ಪರಿಶೀಲಿಸಿ ವಾಹನಗಳು ಸಂಚಾರಕ್ಕೆ ಅನುವು ಮಾಡಿಕೊಡುವಂತೆ ತಿಳಿಸಿರುತ್ತೇನೆ. ಈ ಬಗ್ಗೆ ವರದಿ ಮತ್ತು ಕಚ್ಚಾ ನಕ್ಷೆಯನ್ನು ನೀಡುವಂತೆ ಸೂಚಿಸಿದ್ದು ಈ ಬಗ್ಗೆ ಕಚ್ಚಾ ನಕ್ಷ ಮತ್ತು ವರದಿಯನ್ನು ಅವರು ನನಗೆ ನೀಡಿರುತ್ತಾರೆ. ಲುಡ್ಡುರಾಮ್ ಮೀನಾರವರು ನೀಡಿದ ವರದಿ ಮತ್ತು ಕಚ್ಚಾ ನಕ್ಷೆ ಆಧಾರದಲ್ಲಿ ನಾನು ನಕ್ಷೆ ಮತ್ತು ನಷ್ಟದ ವರದಿಯನ್ನು ತಯಾರಿಸಿ ನೀಡಿರುತ್ತೇನೆ.

ನಾನು ನೀಡಿದ ನಷ್ಟದ ವರದಿಯನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ನಾನು ತಯಾರಿಸಿದ ನಕ್ಷೆಯನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಈಗಾಗಲೇ ನಿಪಿ8 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 8(ಎ) ಎಂದು ಗುರುತಿಸಲಾಯಿತು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಎಸ್ ವಕೀಲರಿಂದಃ**

ನಾನು ಸ್ಥಳಕ್ಕೆ ಬೇಟಿ ನೀಡಿಲ್ಲ ಎಂದರೆ ಸರಿ. ಮೀನಾ ರವರು ನಾನು ಹೇಳಿದಂತೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿಲ್ಲ, ನನಗೆ ಯಾವುದೇ ಕಚ್ಚಾ ನಕ್ಷೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ 7 ಮತ್ತು 8 ರ ದಾಖಲೆಯನ್ನು ನಾನು ನನ್ನ ಕಚೇರಿಯಲ್ಲಿ ಬರೆದಿರುತ್ತೆನೆ ಎಂದರೆ ಸರಿ. ನಿಪಿ 7 ರಂತೆ ನಷ್ಟ ವರದಿಯನ್ನು ನಾನು ನಮ್ಮ ಇಲಾಖೆಯ ಮೌಲ್ಯಪಟ್ಟಿಯಂತೆ ತಯಾರಿಸಿರುತ್ತೇನೆ. ಮೌಲ್ಯಪಟ್ಟಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ಆಗುವುದಿಲ್ಲ ಕಾರಣ ಅದು ಮೇಲಾಧಿಕಾರಿಗಳ ವಶದಲ್ಲಿರುತ್ತದೆ. ಹಾನಿಗೊಳಗಾದ ಗೇಟಿನ ಮೂಲ ಬೆಲೆ ಎಷ್ಟು ಎಂಬುದನ್ನು ನಾನು ತಿಳಿದುಕೊಂಡಿಲ್ಲ. ಅದು ಯಾವ ವರ್ಷದ್ದು ಎಂದು ನಾನು ತಿಳಿದುಕೊಂಡಿಲ್ಲ. ಯಾವುದೇ ವಸ್ತುವಿನ ಮೌಲ್ಯ ವರ್ಷದಿಂದ ವರ್ಷಕ್ಕೆ ಕಮ್ಮಿಯಾಗುತ್ತದೆ ಎಂದರೆ ಸರಿ. ನಾನು ನಿಪಿ 7 ಮತ್ತು 8 ದಾಖಲೆಯನ್ನು ಮೇಲಾಧಿಕಾರಿಗಳು ಹೇಳಿದಂತೆ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ತಯಾರಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಗೊತ್ತಿಲ್ಲದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ, ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇಲ್ಲಾ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ಯವರ ನ್ಯಾಯಾಲಯ, ಚಾಮರಾಜನಗರ .

ಸಿಸಿ. 1736/2017

| | | | |
|---|---|---|---|
| ಸಾಕ್ಷಿದಾರರು ಹೆಸರು | : ನಿಂಗಣ್ಣ | ದಿನಾಂಕಃ **29.11.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು. |
| ತಂದೆಯ ಹೆಸರು | : ಬಾಲಸಿಂಗಪ್ಪ | |
| ವಯಸ್ಸು | : **66** ವರ್ಷ | |
| ಉದ್ಯೋಗ | : ನಿವೃತ್ತ ರೈಲ್ವೆ ಗೇಟ್ ಮ್ಯಾನ್ | **CW-6** |
| ವಾಸಸ್ಥಳ | : ಬದನಗುಪ್ಪೆ ಗ್ರಾಮ | **PW-6** |

ಮುಖ್ಯ ವಿಚಾರಣೆ : ಮಾನ್ಯ ಹಿರಿಯ ಸರ್ಕಾರಿ ಅಭಿಯೋಜಕರು, ರೈಲ್ವೆ ಇಲಾಖೆಃ

ನಾನು ಸುಮಾರು ವರ್ಷಗಳ ಕಾಲ ಬದನಗುಪ್ಪೆಯಲ್ಲಿ ಇರುವ ಗೇಟ್ ನಂಬರ್ 47 ರಲ್ಲಿ ಗೇಟ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸಿ ಅಲ್ಲೆ ನಿವೃತ್ತನಾಗಿರುತ್ತೇನೆ.

ದಿನಾಂಕಃ 26.04.2017 ರಂದು ಮೇಲೆ ಹೇಳಿದ ಗೇಟ್ ನಲ್ಲಿ ಬೆಳಿಗ್ಗೆ 7 ರಿಂದ ಸಂಜೆ 7.00 ಗಂಟೆಯವರೆಗೆ ಕರ್ತವ್ಯದಲ್ಲಿದ್ದೆ. ಆ ದಿನ ಬೆಳಿಗ್ಗೆ 7.00 ಗಂಟೆಗೆ ನಾನು ಸದರಿ ರೈಲ್ವೆ ಗೇಟ್ ಬಳಿ ಹೋಗಿ ನೋಡಿದಾಗ ರೈಲ್ವೆ ಗೇಟು ಜಖಂ ಆಗಿದ್ದು ಗೇಟ್ ಮ್ಯಾನ್ ಆಗಿ ಚಾಸಾ 3 ರವರು ಕರ್ತವ್ಯದಲ್ಲಿದ್ದು ಈ ಬಗ್ಗೆ ನಾನು ಕೇಳಿದಾಗ ಹಿಂದಿನ ದಿನ ರಾತ್ರಿ ಬೈಕಿನಿಂದ ಅಪಘಾತವಾಗಿದ್ದು ತಾನು ಈ ವಿಚಾರವನ್ನು ಮೇಲಾಧಿಕಾರಿಗಳಿಗೆ ತಿಳಿಸಿರುವುದಾಗಿ ಹೇಳಿದರು. ನಂತರ ಚಾಸಾ 3 ರವರಿಂದ ನಾನು ಕರ್ತವ್ಯವನ್ನು ವಹಿಸಿಕೊಂಡಿದ್ದು ಅದೇ ದಿನ ಬೆಳಿಗ್ಗೆ 7.30 –8.00 ರ ಸಮಯದಲ್ಲಿ ರೈಲ್ವೆ ಪೋಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಂತರ ಪೋಲೀಸರು ಚಾಸಾ 3 ರವರನ್ನು ಸ್ಥಳಕ್ಕೆ ಕರೆಯಿಸಿ ನನ್ನ ಸಮಕ್ಷಮ ಮಹಜರ್ ಮಾಡಿರುತ್ತಾರೆ. ಮಹಜರನ್ನು ನನಗೆ ಓದಿ ತಿಳಿಸಿ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ನಿಪಿಃ1 ರ ಮಹಜರನ್ನು ತೋರಿಸಿ ತನ್ನ ಸಹಿಯನ್ನು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ1(ಡಿ) ಎಂದು ಗುರುತಿಸಲಾಯಿತು. ಪೋಲೀಸರು ನನ್ನಿಂದ ಬೈಕನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ. ನಿಪಿ 3 ರಲ್ಲಿ ಕಾಣುವ ಬೈಕು ಆ ದಿನ ನಾನು ರೈಲ್ವೆ ಪೋಲೀಸರ ವಶಕ್ಕೆ ನೀಡಿದ ಬೈಕ್ ಆಗಿರುತ್ತದೆ,

**ಪಾಟೀಸವಾಲುಃ ಆರೋಪಿ ಪರ ಶ್ರೀ ಸಿ ಎಸ್ ವಕೀಲರಿಂದಃ**

ಎಲ್ ಜಿ 47 ಗೇಟು ಪಣ್ಯದಹುಂಡಿ ಮತ್ತು ಬದನಗುಪ್ಪೆ ಗ್ರಾಮಗಳಿಗೆ ಮಧ್ಯದಲ್ಲಿದೆ ಎಂದರೆ ಸರಿ . ಚಾಸಾ 3 ಗಿರೀಶ್ ರವರು ಪಣ್ಯದಹುಂಡಿ ಗ್ರಾರಾಮಕ್ಕೆ ಸೇರಿದವರು ಎಂದರೆ ಸರಿ. ಆ ದಿನ ನಾನು ಮತ್ತು ಚಾಸಾ 3 ರವರು ಮಾತ್ರ ಕರ್ತವ್ಯದಲ್ಲಿದ್ದೇವು. ಅಪಘಾತ ಮಾಡಿದ ಬೈಕಿನ ನೋಂದಣಿ ಸಂಖ್ಯೆ ಮತ್ತು ಅದರ ವಿವರಗಳನ್ನು ನನಗೆ ಚಾಸಾ 3 ರವರು ಹೇಳಿರುವುದಿಲ್ಲ, ಸ್ಥಳಕ್ಕೆ ಇಬ್ಬರೂ ರೈಲ್ವೆ ಪೋಲೀಸರು ಬಂದಿದ್ದರು.

ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ಸ್ಥಳಿಯರನ್ನು ವಿಚಾರಣೆ ಮಾಡಿ ಸಹಿ ಮಾಡಿಸಿಕೊಂಡಿರುವುದಿಲ್ಲ. ಮಹಜರಗೆ ಪಂಚರಾಗುವಂತೆ ನನಗೆ ಲಿಖಿತವಾಗಿ ನೋಟೀಸು ನೀಡಿರುವುದಿಲ್ಲ. ಕೃತ್ಯ ನಡೆದ ಸ್ಥಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ.

ಚಾಸಾ 3 ರವರು ಅಪಘಾತದ ಬಗ್ಗೆ ನನಗೆ ತಿಳಿಸಿದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ 1 ರಂತೆ ಮಹಜರ್ ಮಾಡಿದರು ಎಂದು ನಾನು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿ ಯಾವುದೇ ಅಪಘಾತ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಬೈಕನ್ನು ಪೋಲೀಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ನಿಪಿ 1 ಮಹಜರ್ ಗೆ ಕಚೇರಿಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇ ಒ.,

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಚಾಮರಾಜನಗರ.